ಅ.ದಾ. ಸಂಖ್ಯೆ:- 09/15
ಪಿಡಬ್ಲ್ಯೂ:-1

ದಿನಾಂಕಃ 14.10.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಡಿ ಸಿ ವಕೀಲರಿಂದ.

ನಾನು ಸ ನಂ 115 ರಲ್ಲಿ 5 ಎಕರೆ 22 ಗುಂಟೆ ಖರೀದಿ ಮಾಡಿರುತ್ತೇನೆ.ನಾನು ಖರೀದಿ ಮಾಡುವಾಗ ದಾವಾ ಸ್ವತ್ತನ್ನು ಅಳತೆ ಮಾಡಿಸಿರುವುದಿಲ್ಲ. ದಾವಾ ಸ್ವತ್ತಿನ ಸುತ್ತ ನಾನು ಖರೀದಿ ಮಾಡುವಾಗ ಮುಳ್ಳಿನ ಬೇಲಿ ಇತ್ತು, ಹಾಗೂ ಸ ನಂ 117 ರಲ್ಲಿ ಹಡ್ಡೆ ಇದ್ದು ಅದನ್ನು ಸೇರಿ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿದ ಕ್ರಯ ಪತ್ರದಲ್ಲಿ ಸನಂ 117 ರಲ್ಲಿನ ಹಡ್ಡೆ ಬಗ್ಗೆ ಹೇಳಿರುವುದಿಲ್ಲ.ನಿಪಿ-3 ರ ಚೆಕ್ಕು ಬಂದಿ ಪೂರ್ವಕ್ಕೆ ಟಿ ಕೆ ಡಿ ಬಿ ರಸ್ತೆ ಪಶ್ಚಿಮಕ್ಕ ಸ ನಂ 117 ರಖಾಲಿ ಜಾಗ ಉತ್ತರಕ್ಕೆ ಕೆರೆ, ದಕ್ಷಿಣಕ್ಕೆ ಹೊಳೆ ಕೊಪ್ಪ ರಸ್ತೆ ಬರುತ್ತದೆ. ನಾನು ನಿಪಿ-3 ರಲ್ಲಿ ನಮೂದು ಆಗಿರುವ ಚೆಕ್ಕು ಬಂದಿಯ ಪ್ರಕಾರ ಖರೀದಿ ಮಾಡಿರುತ್ತೇನೆ. ಸ ನಂ 116 ರಲ್ಲಿ ಮೇಲೆ ಹೇಳಿದ ಕೆರೆ ಬರುತ್ತದೆ. ಸ ನಂ 117 ರಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಸಹೋದರ ಮತ್ತು ಸಹೋದರಿಯರು ಸೇರಿ ಬಗರ್ ಹುಕುಂ ಗೆ ಅರ್ಜಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಸ ನಂ 117 ರಲ್ಲಿ 1 ನೇ ಪ್ರತಿವಾದಿಗೆ 2 ಎಕರೆ ಜಮೀನು ಸರ್ಕಾರದಿಂದ ಮಂಜೂರಾದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನ್ಯಾಯಾಲಯದಿಂದ ಕಮೀಷನರ್ ಅನ್ನು ದಾವಾ ಸ್ವತ್ತನ್ನು ಅಳತೆ ಮಾಡಲು ನನ್ನಿಂದ ಯಾವುದೇ ತಕರಾರು ಇರುವುದಿಲ್ಲ. ಸ ನಂ 116 ರಲ್ಲಿರುವ ಕರೆಯು ಸರ್ಕಾರಿ ಕೆರೆ ಆಗಿರುತ್ತದೆ. ಆ ಸರ್ಕಾರಿ ಕೆರೆ ಯು ದನ ಕರುಗಳು ಹಾಗೂ ಕಾಡು ಪ್ರಾಣಿಗಳು ನೀರು ಕುಡಿಯಲು ಇರುವಂತದ್ದು ಎಂದರೆ ಸರಿಯಲ್ಲ.ಅದರ ಬಗ್ಗೆ ಕ್ರಯ ಪತ್ರದಲ್ಲಿ ನಮೂದು ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉತ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಎರಡನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ತೀರ್ಥಹಳ್ಳಿ